## ಹಸಿವೆಯನ್ನು ತಾಳಲಾರೆ...



ಅಂಗಳದ ಬದಿ ಬೆಳೆದ ಕ್ರೋಟನ್ ಗಿಡದ ಪೊದರಿನೊಳಗೆ ಒಂದು ಪಿಕಳಾರ ಹಕ್ಕಿ (ಬುಲ್ ಬುಲ್) ಹೋಗಿ ಬರುತ್ತಿರುವುದು ನನ್ನ ಕಣ್ಣಿಗೆ ಬಿತ್ತು. ತಾಯಿ ಹಕ್ಕಿ ಇಲ್ಲದ ಸಮಯದಲ್ಲಿ ಮೆಲ್ಲನೆ ಪೊದರನ್ನು ಬಿಡಿಸಿ ನೋಡಿದೆ. ವೃತ್ತಾಕಾರದ ಮೆತ್ತನೆಯ ಗೂಡಿನಲ್ಲಿ ರೆಕ್ಕೆಯೇ ಮೂಡಿರದ ಎರಡು ಪುಟ್ಟ ಮರಿಗಳು ತಾಯಿಯೇ ಆಹಾರದೊಡನೆ ಬಂದಳು ಎಂದು ತಿಳಿದು ಬಾಯನ್ನು ಅಷ್ಟಗಲ ತೆರೆದು ಚಡಪಡಿಸಿದವು. ತಾಯಿ ಬರುವ ಮೊದಲೇ ಅನುಮಾನ ಬರದಂತೆ ಪೊದರನ್ನು ಮುಚ್ಚಿ ದೂರದಿಂದಲೇ ಹಕ್ಕಿಗಳ ಈ ಸಂಸಾರವನ್ನು ಗಮನಿಸುತ್ತಿದ್ದೇನೆ.

—ಡಾ. ವೇಣುಗೋಪಾಲ ಗುರುವಾಯನಕೆರೆ



## ಮಲ್ಲಿಕಾರ್ಜುನ ಕಂಬಿ

ಲೋಕಕಲ್ಯಾಣಕ್ಕಾಗಿ ಪ್ರತಿವರ್ಷ ಶ್ರೀಶೈಲಕ್ಕೆ ಈ ಕಂಬಿಯನ್ನು ಹೊತ್ತು ಒಯ್ಯುತ್ತಾರೆ. ತುಂಬಾ ವಿಶೇಷವಾದ ಅಲಂಕಾರ ಮಾಡಿರುವ ಇವುಗಳಿಗೆ 'ಕಂಬಿ' ಎಂದು ಕರೆಯುತ್ತಾರೆ. ಇವುಗಳಿಗೆ ಶತಮಾನಗಳ ಇತಿಹಾಸವಿದ್ದು ಪಾದಯಾತ್ರೆ ಮೂಲಕ ಶ್ರೀಶೈಲಕ್ಕೆ ತೆರಳಿ ಆ ಮಲ್ಲಿಕಾರ್ಜುನನ ಕೃಪೆಗೆ ಪಾತ್ರರಾಗುತ್ತಾರೆ. ಈ ಕಂಬಿಗಳು ಹೆಚ್ಚಾಗಿ ವಿಜಯಪುರ ಜಿಲ್ಲೆಯ ಆಲಮಟ್ಟಿಯ ಹಿನ್ನೀರಿನ ಗ್ರಾಮಗಳಾದ ಗಣಿ ಚಿಮ್ಮಲಗಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಕಂಡುಬರುತ್ತವೆ.

—ಮಹಾಂತೇಶ ಬಾಗೇವಾಡಿ,
ಚೊಳಚಗುಡ್ಡ

## ಕೊಳಗ

ಇದು ಹಿಂದೆ ಅಡಿಕೆಯನ್ನು ಅಳೆಯುತ್ತಿದ್ದ ಕೊಳಗ. ಈಗ ತೂಕದ ಲೆಕ್ಕದಲ್ಲಿ ಅಡಿಕೆ ಅಳತೆ ಶುರುವಾಗಿದೆ. ಇನ್ನು ಕೆಲವರು ಡಬ್ಬದಲ್ಲಿ ಅಳೆಯುತ್ತಾರೆ. ಇದೆಲ್ಲದರ ಮಧ್ಯೆ ಕೊಳಗ ಮರೆಯಾಗಿದೆ.

—ಮಾಧವಿಲತಾ, ಚಿಪ್ಪಳಕಟ್ಟೆ

